# ಕಣ್ಸನ್ನೆ ಬೆಡಗಿಯ ಸಿನಿಮಾ ಮಾತು



ಕಣ್ಸನ್ನೆ ಬೆಡಗಿ ಪ್ರಿಯಾ ವಾರಿಯರ್ 'ವಿಷ್ಣುಪ್ರಿಯ' ಸಿನಿಮಾ ಮೂಲಕ ಕನ್ನಡ ಸಿನಿಮಾರಂಗದಲ್ಲಿ ರುಜು ಹಾಕಿದ್ದಾರೆ. ಕನ್ನಡಿಗರು ತಮ್ಮನ್ನು ಹೇಗೆ ಸ್ವೀಕರಿಸುತ್ತಾರೆ ಎಂಬುದರ ಬಗ್ಗೆ ಕಾತರ, ನಿರೀಕ್ಷೆಯನ್ನೂ ತುಂಬಿಕೊಂಡಿದ್ದಾರೆ.

ಕೆಲವೇ ವರ್ಷಗಳ ಹಿಂದೆ ಪ್ರಿಯಾ ವಾರಿಯರ್ ಕಣ್ಸನ್ನೆ ಭಾರೀ ವೈರಲ್ ಆಗಿತ್ತು. 'ಒರು ಆಡಾರ್ ಲವ್' ಸಿನಿಮಾದಲ್ಲಿ ಅವರ ಕಣ್ಸನ್ನೆ ಅವರಿಗೆ ಜನಪ್ರಿಯತೆ ತಂದುಕೊಟ್ಟಿತು. ಅವರು ಬೆಳಕಿಗೆ ಬರಲು ಒಂದು ನೆಪವಾಗಿತ್ತು ಕೂಡ. ಅವಕಾಶಗಳ ಬಾಗಿಲುಗಳನ್ನೂ ಆ ಕಣ್ಸನ್ನೆ ತೆರೆದಿತ್ತು. ಆದರೆ ಅದೊಂದೇ ತಮ್ಮ ಕರಿಯರ್ ರೂಪಿಸಿಲ್ಲ ಎಂದಿದ್ದಾರೆ ಪ್ರಿಯಾ.

'ನನ್ನ ಕಣ್ಸನ್ನೆಯ ವಿಡಿಯೊ ನನ್ನನ್ನು ಗುರುತಿಸುವಂತೆ ಮಾಡಿತು. ಅದರಲ್ಲೂ ನನ್ನ ಮೊದಲನೇ ಸಿನಿಮಾದಲ್ಲಿಯೇ ಈ ಜನಪ್ರಿಯತೆ ಸಿಕ್ಕಿದ್ದು ಬಹಳ ಸಂತೋಷವಾಗಿತ್ತು. ಆದರೆ ನನ್ನಿಡೀ ಕರಿಯರ್ ಅದರಿಂದಲೇ ರೂಪುಗೊಂಡಿತು ಎಂದು ಹೇಳಲು ಸಾಧ್ಯವಿಲ್ಲ. ನನ್ನ ಸಿನಿಮಾ ಪಯಣ ಅಷ್ಟು ಸರಳವಾಗಿ ಇರಲಿಲ್ಲ. ಸಾಕಷ್ಟು ಶ್ರಮವನ್ನೂ ಒಳಗೊಂಡಿದೆ. ಇಲ್ಲಿಯವರೆಗೆ ಬರಲು ನನ್ನ ಶ್ರಮ, ಶ್ರದ್ಧೆಯೇ ಕಾರಣ' ಎಂದು ಹೇಳಿದ್ದಾರೆ.

ಮಲೆಯಾಳಂ, ತೆಲುಗು ನಂತರ ಇದೀಗ ತಮಿಳು ಸಿನಿಮಾರಂಗಕ್ಕೂ ಕಾಲಿಟ್ಟಿದ್ದಾರೆ ಪ್ರಿಯಾ. ಇದರೊಂದಿಗೆ 'ವಿಷ್ಣುಪ್ರಿಯ' ಮೂಲಕ ಕನ್ನಡಿಗರಿಗೂ ಪರಿಚಿತರಾಗೊಂಡಿದ್ದಾರೆ. 90ರ ದಶಕದ ಪ್ರೇಮಕಥೆಯಲ್ಲಿ ಶ್ರೇಯಸ್ ಮಂಜು ಜೊತೆ ನಟಿಸಿರುವ ಪ್ರಿಯಾ, ರಾಷ್ಟ್ರಪ್ರಶಸ್ತಿ ವಿಜೇತ ವಿ.ಕೆ. ಪ್ರಕಾಶ್ ನಿರ್ದೇಶನವೇ ಈ ಸಿನಿಮಾ ಒಪ್ಪಲು ಮುಖ್ಯ ಕಾರಣ ಎಂದಿದ್ದಾರೆ.

ಇದೇ ಸಂದರ್ಭ ಕನ್ನಡ ಭಾಷೆಯ ಬಗ್ಗೆಯೂ ಮಾತನಾಡಿರುವ ಅವರು, 'ಮೊದಲು ಭಾಷೆಯ ವಿಷಯದಲ್ಲಿ ಕಷ್ಟ ಎನ್ನಿಸಿತು. ಹೀಗಾಗಿ ಶೂಟ್‌ಗೂ ಮೊದಲು ತುಂಬಾ ಅಭ್ಯಾಸ ಮಾಡುತ್ತಿದ್ದೆ. ಅತ್ಯುತ್ತಮವಾದ ಅಭಿನಯ ನೀಡಲು ಎಲ್ಲ ರೀತಿ ಪ್ರಯತ್ನ ಮಾಡುತ್ತಿದ್ದೆ. ವರ್ಕ್‌ಶಾಪ್‌ನಲ್ಲಿ ಅಭ್ಯಾಸ ಮಾಡಿದೆ. ಇದು ನನಗೆ ಬಹಳ ಸಹಾಯ ಮಾಡಿತು' ಎಂದು ತಮ್ಮ ಅನುಭವಗಳನ್ನು ಹಂಚಿಕೊಂಡಿದ್ದಾರೆ.

'ನನ್ನ ದಾರಿ ಈಗಷ್ಟೇ ಶುರುವಾಗಿದೆ. ಕಲಾವಿದೆಯಾಗಿ ಬೆಳೆಯಲು ಸೂಕ್ತ ಪ್ರಾಜೆಕ್ಟ್ ಆಯ್ಕೆ ಮಾಡಿಕೊಳ್ಳಬೇಕಿದೆ. ಒಳ್ಳೆಯ ನಟಿ ಎನ್ನಿಸಿಕೊಳ್ಳಬೇಕೆಂದರೆ ಅದಕ್ಕೆ ಸಮಯವೂ ತೆಗೆದುಕೊಳ್ಳುತ್ತದೆ ಎಂಬುದು ಗೊತ್ತಿದೆ. ಒಳ್ಳೆಯ ಕಥೆ ಭಾಷೆಯನ್ನೂ ಮೀರುತ್ತದೆ. ಮಲೆಯಾಳಿ ಆಗಿದ್ದರೂ ನಾನು ಕನ್ನಡ ಸಿನಿಮಾ ನೋಡುತ್ತೇನೆ. ನಿಜವಾಗಿಯೂ ಸಿನಿಮಾಪ್ರೇಮಿಯಾಗಿದ್ದರೆ ಭಾಷೆ ಒಂದು ಮಿತಿ ಅನಿಸುವುದಿಲ್ಲ' ಎನ್ನುತ್ತಲೇ 'ಸಪ್ತಸಾಗರದಾಚೆ ಎಲ್ಲೊ', 'ಲವ್ ಮಾಕ್ಟೇಲ್', 'ಕೆಜಿಎಫ್', 'ಕಾಂತಾರ' ಸಿನಿಮಾಗಳು ತಮ್ಮ ಫೇವರೆಟ್ ಕನ್ನಡ ಸಿನಿಮಾಗಳು ಎನ್ನುತ್ತಾರೆ. ■

# 'ಬಿಲ್ಲ ರಂಗ ಬಾಷ'ಗೆ ಭರ್ಜರಿ ಸಿದ್ಧತೆ



'ಮ್ಯಾಕ್ಸ್' ಸಿನಿಮಾ ನಂತರ ಮತ್ತೊಂದು ದೊಡ್ಡ ಪ್ರಾಜೆಕ್ಟ್‌ಗೆ ನಟ ಸುದೀಪ್ ಅಣಿಯಾಗುತ್ತಿದ್ದು, ಕೆಲವೇ ದಿನಗಳಲ್ಲಿ ಚಿತ್ರೀಕರಣ ಆರಂಭವಾಗಲಿದೆ. ಅನೂಪ್ ಭಂಡಾರಿ ನಿರ್ದೇಶನದಲ್ಲಿ ಮೂಡಿಬರುತ್ತಿರುವ 'ಬಿಲ್ಲ ರಂಗ ಬಾಷ' ಸಿನಿಮಾ ಚಿತ್ರೀಕರಣ ಇದೇ ಮಾರ್ಚ್ ತಿಂಗಳಿನಿಂದ ಆರಂಭವಾಗುವುದಾಗಿ ಸಾಮಾಜಿಕ ಜಾಲತಾಣದಲ್ಲಿ ಅಭಿಮಾನಿಗಳೊಂದಿಗೆ ಸುದ್ದಿ ಹಂಚಿಕೊಂಡಿದ್ದಾರೆ.

'ವಿಕ್ರಾಂತ್ ರೋಣ' ನಂತರ ಈ ಜೋಡಿ ಮತ್ತೆ ಒಂದಾಗುತ್ತಿದೆ. ಅನೂಪ್ ಭಂಡಾರಿ ಹಾಗೂ ಸುದೀಪ್ ಕಾಂಬಿನೇಷನ್‌ನ ಈ ಸಿನಿಮಾ ಬಗ್ಗೆ ಅಭಿಮಾನಿಗಳಲ್ಲಿ ಕುತೂಹಲವೂ ಹೆಚ್ಚಿದೆ.

ಈ ಸಿನಿಮಾವನ್ನು ಎರಡು ಭಾಗಗಳ ನರೇಷನ್‌ನಲ್ಲಿ ಯೋಜಿಸಲಾಗಿದ್ದು, ಬೆಂಗಳೂರಿನ ಹೊರವಲಯದಲ್ಲಿ ಸಿನಿಮಾಗೆಂದು ವಿಶೇಷ ಸೆಟ್ ಹಾಕಲಾಗುತ್ತಿದೆ ಎಂದು ಮಾಹಿತಿ ನೀಡಿದ್ದಾರೆ ಅನೂಪ್.

ಈ ಪ್ರಾಜೆಕ್ಟ್‌ನ ಸ್ಕೇಲ್ ಬಗ್ಗೆ ಮಾತನಾಡಿರುವ ಅವರು, ಕಸ್ಟಮ್ ವಿನ್ಯಾಸಿತ 3ಡಿ ಸೆಟ್‌ಗಳನ್ನು ಹಾಗೂ ವಿಎಫ್‌ಎಕ್ಸ್ ಅನ್ನು ದೊಡ್ಡ ಮಟ್ಟದಲ್ಲಿ ಯೋಜಿಸಿರುವುದಾಗಿ ತಿಳಿಸಿದ್ದಾರೆ. ಈ ಸಿನಿಮಾವನ್ನು 3ಡಿ ಹಾಗೂ 2ಡಿ ಎರಡೂ ಫಾರ್ಮಾಟ್‌ನಲ್ಲಿ ಬಿಡುಗಡೆಗೊಳಿಸುವುದಾಗಿ ತಿಳಿಸಿದ್ದಾರೆ. ಪ್ರೇಕ್ಷಕರಿಗೆ ಈ ಸಿನಿಮಾ ಉತ್ತಮ ವಿಷುವಲ್ ಅನುಭವ ನೀಡುವುದಾಗಿ ಹೇಳಿದ್ದು, ಕೆಲವು ತಿಂಗಳಿನಿಂದ ಶೂಟಿಂಗ್ ಸಿದ್ಧತೆಗಳು ಭರ್ಜರಿಯಾಗಿ ನಡೆಯುತ್ತಿವೆ ಎಂದು ಮಾಹಿತಿ ನೀಡಿದ್ದಾರೆ.

ಸಿನಿಮಾದ ಪ್ರಮುಖ ಪಾತ್ರಗಳನ್ನು ಈಗಾಗಲೇ ಆಯ್ಕೆ ಮಾಡಲಾಗಿದ್ದು, ಇನ್ನುಳಿದ ಪಾತ್ರಗಳ ಕುರಿತು ಶೀಘ್ರ ಮಾಹಿತಿ ನೀಡುವುದಾಗಿ ತಿಳಿಸಿದ್ದಾರೆ. ನಿರಂತರವಾಗಿ 20–25 ದಿನಗಳ ಕಾಲ ಶೂಟಿಂಗ್ ನಡೆಯಲಿದ್ದು, ಹೊರಾಂಗಣ ಹಾಗೂ ಒಳಾಂಗಣ ಸೆಟ್‌ಗಳನ್ನು ಬಹಳ ವಿಶೇಷವಾಗಿ ವಿನ್ಯಾಸ ಮಾಡುತ್ತಿರುವುದಾಗಿ ಹೇಳಿದ್ದಾರೆ.

■